# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:-** ಶ್ರೀ ಎಲ್.ಹೆಚ್.ಪೂಜಾರ್, ಹಿಂದಿನ ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯಿತಿ, ಚಿಕ್ಕೋಡಿ, ಹಾಲಿ ನಿವೃತ್ತಿ ಇವರಿಗೆ ವಿಧಿಸಿರುವ ದಂಡನೆ ಮಾರ್ಪಡಿಸುವ ಬಗ್ಗೆ.

**ಓದಲಾಗಿದೆ:-**
1. ಸರ್ಕಾರದ ಆದೇಶದ ಸಂಖ್ಯೆ:ಗ್ರಾಅಪ 140 ವಿಸೇಚಿ 2001 ದಿನಾಂಕ:21.12.2005.
2. ಕರ್ನಾಟಕ ಆಡಳಿತ ನ್ಯಾಯಮಂಡಳಿಯ ತೀರ್ಪು ದಿನಾಂಕ:07.02.2013
3. ಶ್ರೀ ಎಲ್.ಹೆಚ್.ಪೂಜಾರ್, ಇವರ ಮನವಿ ದಿನಾಂಕ:22.02.2013
4. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ಬೆಳಗಾವಿ ಇವರ ಪತ್ರ ಸಂಖ್ಯೆ: ಜಿಪಂ/ತಾಪಸ/ಸಿಬ್ಬಂದಿ/ವಿವ-53/2004-05 ದಿನಾಂಕ:12.03.2013

****

**ಪ್ರಸ್ತಾವನೆ:**

ಶ್ರೀ ಎಲ್.ಹೆಚ್.ಪೂಜಾರ್, ಹಿಂದಿನ ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತಿ, ಚಿಕ್ಕೋಡಿ ಹಾಲಿ ನಿವೃತ್ತಿ ರವರು ಸದರಿ ಹುದ್ದೆಯಲ್ಲಿ ಕರ್ತವ್ಯನಿರ್ವಹಿಸುತ್ತಿದ್ದ ಸಂಧರ್ಭದಲ್ಲಿ ಮೇಲಾಧಿಕಾರಿಗಳ ನಿರ್ದೇಶನ ಮತ್ತು ವಸತಿ ಯೋಜನೆ ಫಲಾನುಭವಿಗಳಯಾದಿಯನ್ನು ಬದಲಾವಣೆ ಮಾಡಿ ಕರ್ತವ್ಯಚ್ಯುತಿ ಎಸಗಿರುವುದು ಇಲಾಖಾ ವಿಚಾರಣೆಯಲ್ಲಿ ದೃಢಪಟ್ಟಿದ್ದರಿಂದ ಅವರ ಕರ್ತವ್ಯಲೋಪಕ್ಕೆ ಸಂವಾದಿಯಾಗಿ ಅವರ ನಿವೃತ್ತಿ ವೇತನದ ಶೇ50 ರಷ್ಟನ್ನು 5 ವರ್ಷದ ಅವಧಿಗೆ ಕಟಾಯಿಸುವ ದಂಡನೆಯನ್ನು ಮೇಲೆ ಕ್ರಮ ಸಂಖ್ಯೆ(1)ರಲ್ಲಿ ಓದಲಾದ ದಿನಾಂಕ:21-12-2005 ರ ಆದೇಶದಲ್ಲಿ ವಿಧಿಸಲಾಗಿತ್ತು. ಈ ಆದೇಶವನ್ನು ಸದರಿಯವರು ಅರ್ಜಿ ಸಂಖ್ಯೆ:1138/2006ರಲ್ಲಿ ಮಾನ್ಯ ಕರ್ನಾಟಕ ಆಡಳಿತ ನ್ಯಾಯಮಂಡಳಿಯಲ್ಲಿ ಪ್ರಶ್ನಿಸಿದ್ದರು. ಮಾನ್ಯ ಕರ್ನಾಟಕ ಆಡಳಿತ ನ್ಯಾಯಮಂಡಳಿಯು ಈ ಅರ್ಜಿಯನ್ನು ದಿನಾಂಕ:07.02.2013ರಂದು ಇತ್ಯರ್ಥಪಡಿಸಿ ಈ ಕೆಳಕಂಡಂತೆ ಆದೇಶಿಸಿರುತ್ತದೆ:-

"We therefore allow the application and modify the penalty imposed in G.O. No. ಗ್ರಾಅಪ 140 ವಿಸೇಚಿ 2001 dated 21.12.2005 to one of the penalty of with holding pensionary benefits to the extent of 50% of the pension for a period of one year. The excess amount withheld from the pension of the applicant shall be refunded to him with in two months from today".

ಶ್ರೀ ಎಲ್.ಹೆಚ್.ಪೂಜಾರ್‌ರವರು ದಿನಾಂಕ:22.02.2013ರಂದು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯಿತಿ, ಬೆಳಗಾವಿ ಇವರಿಗೆ ದಿನಾಂಕ:07.02.2013ರ ಮಾನ್ಯ ಕರ್ನಾಟಕ ಆಡಳಿತ ನ್ಯಾಯಮಂಡಳಿಯ ಆದೇಶದೊಂದಿಗೆ ಮನವಿ ಸಲ್ಲಿಸಿ ಮಾನ್ಯ ಕರ್ನಾಟಕ ಆಡಳಿತ ನ್ಯಾಯಮಂಡಳಿಯ ಆದೇಶದಂತೆ ಕಡಿತಗೊಳಿಸಿರುವ 4 ವರ್ಷದ ಪಿಂಚಣಿ ಮೊತ್ತವನ್ನು ಮರುಪಾವತಿಸಲು ಕೋರಿರುತ್ತಾರೆ. ಸದರಿ ಮನವಿಯನ್ನು ಮೇಲೆ(3)ರಲ್ಲಿ ಓದಲಾದ ಪತ್ರದೊಂದಿಗೆ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯಿತಿ, ಬೆಳಗಾವಿ ಇವರು ಮುಂದಿನ ಕ್ರಮಕ್ಕಾಗಿ ಸರ್ಕಾರಕ್ಕೆ ಸಲ್ಲಿಸಿರುತ್ತಾರೆ.

ಸರ್ಕಾರವು ಪ್ರಕರಣವನ್ನು ಪರಿಶೀಲಿಸಿದ್ದು, ಶ್ರೀ ಎಲ್.ಹೆಚ್.ಪೂಜಾರ್, ನಿವೃತ್ತ ಕಾರ್ಯನಿರ್ವಾಹಕ ಅಧಿಕಾರಿ ಇವರಿಗೆ ಸರ್ಕಾರದ ಆದೇಶ ದಿನಾಂಕ:21-12-2005ರಲ್ಲಿ ಅವರ ನಿವೃತ್ತಿ ವೇತನದ ಶೇ.50 ರಷ್ಟನ್ನು 5 ವರ್ಷದ ಅವಧಿಗೆ ಕಟಾಯಿಸಲು ಆದೇಶಿಸಿರುವುದನ್ನು ಮಾನ್ಯ ಕರ್ನಾಟಕ ಆಡಳಿತ ನ್ಯಾಯಮಂಡಳಿಯು ಕೆ.ಎ.ಟಿ.ಯ ಅರ್ಜಿ ಸಂಖ್ಯೆ:1138/2006 ದಿನಾಂಕ:07-02-2013 ರಲ್ಲಿ ನೀಡಿರುವ ಆದೇಶದಂತೆ ಮಾರ್ಪಡಿಸಲು ತೀರ್ಮಾನಿಸಿದೆ. ಅದರಂತೆ ಈ ಆದೇಶ

**ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ :36 : ವಿಸೇಚಿ : 2013 ಬೆಂಗಳೂರು ದಿನಾಂಕ:22-11-2013**

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 140 ವಿಸೇಚಿ 2001, ದಿನಾಂಕ:21.12.2005ರಲ್ಲಿ ಶ್ರೀ ಎಲ್.ಹೆಚ್.ಪೂಜಾರ್, ನಿವೃತ್ತ ಕಾರ್ಯನಿರ್ವಾಹಕ ಅಧಿಕಾರಿ, ರವರಿಗೆ ಅವರ ನಿವೃತ್ತಿ ವೇತನದ ಶೇ 50 ರಷ್ಟು 5 ವರ್ಷಗಳವರೆಗೆ ಕಡಿತಗೊಳಿಸಿರುವ ದಂಡನೆಯನ್ನು ಮಾರ್ಪಡಿಸಿ, ಮಾನ್ಯ ಕರ್ನಾಟಕ ಆಡಳಿತ ನ್ಯಾಯಮಂಡಳಿಯು ಅರ್ಜಿ ಸಂಖ್ಯೆ:1138/2006ರಲ್ಲಿ ದಿನಾಂಕ:07.02.2013 ರಂದು ನೀಡಿರುವ ಆದೇಶದಂತೆ ಶ್ರೀ ಎಲ್.ಹೆಚ್. ಪೂಜಾರ್ ರವರ ನಿವೃತ್ತಿ ವೇತನದ ಶೇ.50 ರಷ್ಟನ್ನು ಒಂದು ವರ್ಷದ ಅವಧಿಗೆ ಮಾತ್ರ ಕಟಾಯಿಸಲು ಮತ್ತು ಈಗಾಗಲೇ 4 ವರ್ಷಗಳಲ್ಲಿ ಕಟಾಯಿಸಲಾಗಿರುವ ವ್ಯತ್ಯಾಸದ ಮೊತ್ತವನ್ನು ಅವರಿಗೆ ಹಿಂದಿರುಗಿಸಲು ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು
ಅವರ ಹೆಸರಿನಲ್ಲಿ

(ಚಂದ್ರಶೇಖರ್)
ಸರ್ಕಾರದ ಅಧೀನ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

23/11/13

ಗೆ,

1) ಮಹಾಲೇಖಪಾಲರು(ಎ &ಇ), ಕರ್ನಾಟಕ, ಬೆಂಗಳೂರು
2) ಜಿಲ್ಲಾಧಿಕಾರಿ, ಬೆಳಗಾವಿ ಜಿಲ್ಲೆ, ಬೆಳಗಾವಿ.
3) ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ಬೆಳಗಾವಿ.
4) ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಆಪ್ತ ಕಾರ್ಯದರ್ಶಿಗಳಿಗೆ.
5) ಶ್ರೀ ಎಲ್.ಹೆಚ್.ಪೂಜಾರ್, ನಿವೃತ್ತ ಕಾರ್ಯನಿರ್ವಾಹಕ ಅಧಿಕಾರಿಗಳು, ಮನೆ ನಂ.496, ಶಿವಕೃಪಾ ಸದನ, 4ನೇ ಕ್ರಾಸ್, ವಿಜಯ ನಗರ, [ಹಿಂಡಲಾಗ] ಪೋಸ್ಟ್, ಬೆಳಗಾವಿ -591108
6) ಸರ್ಕಾರದ ಪ್ರಧಾನ ಕಾರ್ಯದರ್ಶಿ / ಕಾರ್ಯದರ್ಶಿ(ಪಂ.ರಾಜ್) / ಅಪರ ಕಾರ್ಯದರ್ಶಿ(ಆಡಳಿತ), ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ ರವರ ಆಪ್ತ ಶಾಖೆಗೆ
7) ಮೇಲ್ವಿಚಾರಕರು, ಗಣಕ ಕೋಶ, ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ
8) ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿಗಳು